ಕರ್ನಾಟಕ ವಿಧಾನ ಪರಿಷತ್

1). ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 717

2). ಸದಸ್ಯರ ಹೆಸರು : ಶ್ರೀ ಕೆ.ಸಿ.ಕೊಂಡಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3). ಉತ್ತರಿಸುವ ದಿನಾಂಕ : 12.03.2020

4). ಉತ್ತರಿಸುವ ಸಚಿವರು : ಸನ್ಮಾನ್ಯ ಮುಖ್ಯಮಂತ್ರಿಯವರು

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	2018-19ನೇ ಸಾಲಿನಲ್ಲಿ ಬಳ್ಳಾರಿ ವಿಧಾನ ಪರಿಷತ್ ಸದಸ್ಯರಿಗೆ ಕೆ-ಲ್ಯಾಡ್ಸ್ ಯೋಜನೆಯಡಿಯಲ್ಲಿ ಅನುಮೋದನೆಗೊಂಡು ಮಂಜೂರಾಗಿರುವ ಕಾಮಗಾರಿಗಳ ಹಣವೆಷ್ಟು;	ಬಳ್ಳಾರಿ ಜಿಲ್ಲೆಯಲ್ಲಿ ಇಬ್ಬರು ವಿಧಾನ ಪರಿಷತ್ ಸದಸ್ಯರು ಇರುತ್ತಾರೆ. 1. ಮಾನ್ಯ ಶ್ರೀ.ಕೆ.ಸಿ.ಕೊಂಡಯ್ಯ ಮಾನ್ಯ ವಿಧಾನ ಪರಿಷತ್ ಸದಸ್ಯರು-ಇವರಿಗೆ 2018-19ನೇ ಸಾಲಿನಲ್ಲಿ ರೂ.169.7550 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಒಟ್ಟು 33 ಕಾಮಗಾರಿಗಳಿಗೆ ರೂ.178.45 ಲಕ್ಷಗಳ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಗಿರುತ್ತದೆ. 2. ಮಾನ್ಯ ಶ್ರೀ.ಅಲ್ಲಂ ವೀರಭದ್ರಪ್ಪ, ಮಾನ್ಯ ವಿಧಾನ ಪರಿಷತ್ ಸದಸ್ಯರು-ಇವರಿಗೆ 2018-19ನೇ ಸಾಲಿನಲ್ಲಿ ರೂ.169.7550 ಲಕ್ಷಗಳ ಅನುದಾನವು ಬಿಡುಗಡೆಯಾಗಿದ್ದು, ಒಟ್ಟು 39 ಕಾಮಗಾರಿಗಳಿಗೆ ರೂ.176.00 ಲಕ್ಷಗಳ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಲಾಗಿರುತ್ತದೆ.
(ಆ)	ಈ ಹಣವನ್ನು ಬಿಡುಗಡೆ ಮಾಡಲಾಗಿದೆಯೇ;	1. ಮಾನ್ಯ ಶ್ರೀ ಕೆ.ಸಿ.ಕೊಂಡಯ್ಯ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಸಲ್ಲಿಸಿರುವ 33 ಕಾಮಗಾರಿಗಳಿಗೆ ರೂ.178.45 ಲಕ್ಷಗಳಲ್ಲಿ ರೂ.121.22 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ. ಉಳಿದ ರೂ.57.23 ಲಕ್ಷಗಳು ಬಿಡುಗಡೆಗೆ ಬಾಕಿ ಇರುತ್ತದೆ. 2. ಮಾನ್ಯ ಶ್ರೀ ಅಲ್ಲಂ ವೀರಭದ್ರಪ್ಪ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಸಲ್ಲಿಸಿರುವ 35 ಕಾಮಗಾರಿಗೆಳಿಗೆ ಒಟ್ಟು ಅಂದಾಜು ಪಟ್ಟಿಗಳು ಸ್ವೀಕೃತವಾಗಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ನೀಡಿ ರೂ.143.99 ಲಕ್ಷಗಳ ಅನುದಾನ ಬಿಡುಗಡೆ ಮಾಡಲಾಗಿದೆ.

(ಇ)	2019-20ರಲ್ಲಿ ಈ ಯೋಜನೆಗೆ ಹಣ ಬಿಡುಗಡೆ ಪ್ರಸ್ತಾವನೆ ಇದೆಯೇ; ಇದ್ದರೆ ಯಾವ ಹಂತದಲ್ಲಿದೆ?	1. ಮಾನ್ಯ ಶ್ರೀ ಕೆ.ಸಿ.ಕೊಂಡಯ್ಯ ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರಿಗೆ ಮೊದಲನೆಯ ಮತ್ತು ಎರಡನೆಯ ಕಂತಿನ ಅನುದಾನವೆಂದು ಒಟ್ಟು ರೂ.70.67 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. 2. ಮಾನ್ಯ ಶ್ರೀ ಅಲ್ಲಂ ವೀರಭದ್ರಪ್ಪ, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರಿಗೆ ಮೊದಲನೆಯ ಮತ್ತು ಎರಡನೆಯ ಕಂತಿನ ಅನುದಾನವೆಂದು ರೂ.70.67 ಲಕ್ಷಗಳ ಅನುದಾನ ಬಿಡುಗಡೆಯಾಗಿರುತ್ತದೆ. ಮಾನ್ಯ ಶಾಸಕರುಗಳು ಶಿಫಾರಸ್ಸು ಮಾಡಿರುವಂತಹ ಪ್ರಸ್ತಾವನೆಗಳಿಗೆ ತಲಾ ರೂ.2.00 ಕೋಟಿಗಳ ಮಿತಿಗೊಳಪಟ್ಟು ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುದಾನ ನೀಡಿ ಅನುಷ್ಠಾನಗೊಳಿಸಲು ನಿರ್ದೇಶನ ನೀಡಲಾಗಿದೆ.

ಸಂಖ್ಯೆ: ಪಿಡಿಎಸ್ 18 ಕೆಎಲ್‌ಎಸ್ 2020

ಬಿ.ಎಸ್. ಯಡಿಯೂರಪ್ಪ

(ಬಿ.ಎಸ್.ಯಡಿಯೂರಪ್ಪ),

ಮುಖ್ಯಮಂತ್ರಿ